# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **367 (362)** |
| **ಸದಸ್ಯರ ಹೆಸರು** | : | **ಶ್ರೀ ಸೂರಜ್ ರೇವಣ್ಣ** |
| **ಉತ್ತರಿಸುವ ದಿನಾಂಕ** | : | **07.12.2023** |
| **ಉತ್ತರಿಸುವ ಸಚಿವರು** | : | **ಮಾನ್ಯ ಉಪ ಮುಖ್ಯಮಂತ್ರಿಗಳು** |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಲ್ಲಿ ಬಾಕಿ ಇರುವ ಸಾರ್ವಜನಿಕ ಉಪಯುಕ್ತ ಕಾಮಗಾರಿಗಳು ಯಾವುವು: ಬಾಕಿ ಕಾಮಗಾರಿಗಳನ್ನು ಪೂರೈಸಲು ಬೇಕಾಗಿರುವ ಅನುದಾನದ ಮೊತ್ತ ಎಷ್ಟು: (ವಿವರ ನೀಡುವುದು)</td><td>ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಅಡಿಯಲ್ಲಿ ಬರುವ ಕರ್ನಾಟಕ ನೀರಾವರಿ ನಿಗಮ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಕಾವೇರಿ ನೀರಾವರಿ ನಿಗಮ ನಿಯಮಿತ ಮತ್ತು ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತಗಳಡಿಯಲ್ಲಿ ನೀರಾವರಿ, ಏತ ನೀರಾವರಿ, ಕೆರೆ ತುಂಬಿಸುವ ಯೋಜನೆಗಳು, ರಸ್ತೆ ಅಭಿವೃದ್ಧಿ, ಇತರೆ ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>ನಿಗಮಗಳಡಿಯಲ್ಲಿ ಕೈಗೆತ್ತಿಕೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ರೂ.1,00,000 ಕೋಟಿಗೂ ಅಧಿಕ ಅನುದಾನದ ಅಗತ್ಯವಿರುತ್ತದೆ.</td></tr>
<tr><td>ಆ)</td><td>ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಲ್ಲಿ ನೀರಾವರಿ ನಾಲೆಗೆ ಸಂಬಂಧಪಟ್ಟಂತೆ ರೈತರ ಭೂಮಿ ಸ್ವಾಧೀನಪಡಿಸಿಕೊಂಡಿರುವ ರೈತರ ಸಂಖ್ಯೆ ಮತ್ತು ವಿಸ್ತೀರ್ಣ ಎಷ್ಟು: ರೈತರಿಗೆ ಪರಿಹಾರವನ್ನು ಯಾವ ಮಾನದಂಡದ ಆಧಾರದಲ್ಲಿ ನೀಡಲಾಗಿದೆ. ಪರಿಹಾರ ನೀಡಲು ಇನ್ನೂ ಎಷ್ಟು ಕಾಲಾವಕಾಶ ಬೇಕಾಗುತ್ತದೆ: (ವಿವರ ನೀಡುವುದು)</td><td>ಕಳೆದ ಮೂರು ವರ್ಷಗಳಲ್ಲಿ ಜಲ ಸಂಪನ್ಮೂಲ ಇಲಾಖೆಯ ನಿಗಮಗಳಲ್ಲಿ ಅನುಷ್ಠಾನದಲ್ಲಿರುವ ಯೋಜನೆಗಳಿಗಾಗಿ ಜಮೀನು ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿವರ ಈ ಕೆಳಕಂಡಂತಿದೆ:<br><table><tr><th>ಕ್ರ. ಸಂ</th><th>ನಿಗಮ</th><th>ರೈತರ ಸಂಖ್ಯೆ</th><th>ವಿಸ್ತೀರ್ಣ (ಎ-ಗು)</th></tr><tr><td>1</td><td>KNNL</td><td>6325</td><td>2529-16</td></tr><tr><td>2</td><td>KBJNL</td><td>11418</td><td>7675-13</td></tr><tr><td>3</td><td>CNNL</td><td>1346</td><td>834-5</td></tr><tr><td>4</td><td>VJNL</td><td>5637</td><td>5118-16</td></tr></table><br>ಭೂಸ್ವಾಧೀನ ಕಾಯ್ದೆ 2013 ರ ಕಲಂ 19(1) (2) ರ ಘೋಷಣೆಯಾದಂತೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ-2013 ಅನ್ವಯ ಯೋಜನೆಗೆ ಅವಶ್ಯವಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಕಲಂ 26 ರಿಂದ 30 ರಲ್ಲಿನ ಮಾನದಂಡಗಳನುಸಾರ ಕಲಂ 23 ರಡಿ ಸಿದ್ಧಪಡಿಸಿದ ಜಮೀನುಗಳ ಪರಿಹಾರ ಮೊತ್ತದ ಐ-ತೀರ್ಪಿಗೆ ಅನುಮೋದನೆ ನೀಡಿ, ನಂತರ ಪರಿಹಾರ ಧನ ನೀಡಲಾಗುತ್ತಿದೆ.<br><br>ಇಲಾಖೆಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳಡಿ ಭೂಸ್ವಾಧೀನಗೊಂಡಿರುವ ಜಮೀನುಗಳ ಭೂಪರಿಹಾರ ಪಾವತಿಗೆ ಅಗತ್ಯ ಅನುದಾನ ನೀಡಿ, ನಿಯಮಾನುಸಾರ ಪಾವತಿಸಲು ಆದ್ಯತೆ ಮೇಲೆ ಕ್ರಮವಹಿಸಲಾಗುವುದು.</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಡಿಯಲ್ಲಿ ಕೈಗೊಂಡ ನೀರಾವರಿ ಕಾಮಗಾರಿಗಳಿಂದ 2022-23, 2023-24ನೇ ಸಾಲಿನಲ್ಲಿ ಎಷ್ಟು ಹೆಕ್ಟೇರ್ ಭೂ-ಪ್ರದೇಶಕ್ಕೆ ನೀರಾವರಿ ಯೋಜನೆಯನ್ನು ವಿಸ್ತರಿಸಲಾಗಿದೆ.: ರೈತರುಗಳು ಯಾವ-ಯಾವ ವಿಧದಲ್ಲಿ ಕೃಷಿಗಾಗಿ ನೀರನ್ನು ಬಳಸುತ್ತಿದ್ದಾರೆ: ಹಾಗಿದ್ದಲ್ಲಿ ಇನ್ನೂ ಹೆಚ್ಚಿನ ಭೂ-ಪ್ರದೇಶಕ್ಕೆ ನೀರಾವರಿ ಯೋಜನೆಯನ್ನು ವಿಸ್ತಾರ ಮಾಡಲು ಹನಿ ನೀರಾವರಿ ಯೋಜನೆಯ ವಿಧಾನವನ್ನು ಸರ್ಕಾರ ಕಡ್ಡಾಯ ಮಾಡುವುದೇ? (ವಿವರ ನೀಡುವುದು) | ಜಲ ಸಂಪನ್ಮೂಲ ಇಲಾಖೆಯಡಿ 2022-23 ರಿಂದ ಇದೂವರೆಗೆ ಸುಮಾರು 46,223 ಹೆಕ್ಟೇರ್ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.<br>ಪ್ರಸ್ತುತ, ಕೃಷಿಗಾಗಿ ಏತ ನೀರಾವರಿ ಹಾಗೂ ಗುರುತ್ವ ಕಾಲುವೆಗಳ ಮೂಲಕ ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪ್ರಮುಖವಾಗಿ ಹರಿ ನೀರಾವರಿ ಮೂಲಕ ರೈತರು ಕೃಷಿಗಾಗಿ ನೀರನ್ನು ಬಳಸುತ್ತಿದ್ದಾರೆ.<br>ನೀರಿನ ಮಿತವ್ಯಯ ಬಳಕೆಗಾಗಿ ರಾಮಥಾಳ್, ಶಿಗ್ಗಾಂವ್, ಭದ್ರಾ ಮೇಲ್ದಂಡೆ ಯೋಜನೆ, ಸವಣೂರು ಏತ ನೀರಾವರಿ ಯೋಜನೆ, ಸಿಂಗಟಲೂರು ಏತ ನೀರಾವರಿ ಯೋಜನೆ, ಕೊಪ್ಪಳ ಏತ ನೀರಾವರಿ ಯೋಜನೆ, ಪೂರಿಗಾಲಿ ಏತ ನೀರಾವರಿ ಯೋಜನೆ ಮತ್ತು ನಂದವಾಡಗಿ ಏತ ನೀರಾವರಿ ಯೋಜನೆಗಳಲ್ಲಿ ಒಟ್ಟಾರೆ ಸುಮಾರು 5.20 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಪದ್ಧತಿ ಅಳವಡಿಸಲು ಯೋಜಿಸಲಾಗಿದ್ದು, ಇದೂವರೆಗೆ 0.37 ಲಕ್ಷ ಪ್ರದೇಶಕ್ಕೆ ಸೂಕ್ಷ್ಮ ನೀರಾವರಿ ಅಳವಡಿಸಲಾಗಿದೆ.<br>ಇದೂವರೆಗೆ ಅಳವಡಿಸಲಾದ ಸೂಕ್ಷ್ಮ ನೀರಾವರಿ ಪದ್ಧತಿಯಲ್ಲಿನ ಕಾರ್ಯವಿಧಾನ ಮತ್ತು ಸ್ಥಳೀಯ ಸಮಸ್ಯೆಗಳು/ನ್ಯೂನತೆಗಳನ್ನು ಗಮನಿಸಲಾಗಿ, ಪ್ರಸ್ತುತ, ಪ್ರಗತಿಯಲ್ಲಿರುವ ಹನಿ ನೀರಾವರಿ ಸೌಲಭ್ಯ ಕಲ್ಪಿಸುವ ಯೋಜನೆಗಳಲ್ಲಿ ಅಚ್ಚುಕಟ್ಟು ಪ್ರದೇಶಕ್ಕೆ ಸಂಪೂರ್ಣ ನೀರಾವರಿ ಸೌಲಭ್ಯ ಒದಗಿಸಲು ಅನುವಾಗುವಂತೆ ಪ್ರತಿಯೊಂದು ಹೆಕ್ಟೇರ್‌ಗೆ ಔಟ್‌ಲೆಟ್‌ಗಳನ್ನು ರೂಪಿಸಿ ಮತ್ತು ಔಟ್‌ಲೆಟ್ ನಂತರ ಬರುವ ರೈತರ ಜಮೀನುಗಳಲ್ಲಿ sub main with blind risers ನಿರ್ಮಿಸುವ ಅವಕಾಶ ಕಲ್ಪಿಸಲಾಗಿದ್ದು, ಲ್ಯಾಟರಲ್/ಡ್ರಿಪ್ ಲೈನ್ ಭಾಗಗಳನ್ನು ಮಾತ್ರ ಅಚ್ಚುಕಟ್ಟು ಪ್ರದೇಶದ ರೈತರೇ ಅಳವಡಿಸಿಕೊಳ್ಳುವಂತೆ ಯೋಜಿಸಲಾಗಿರುತ್ತದೆ. ಈ ಮೂಲಕ ಹನಿ ನೀರಾವರಿಗೆ ಸರ್ಕಾರವು ಉತ್ತೇಜನ ನೀಡುತ್ತದೆ. |

**ಸಂಖ್ಯೆ: ಜಸಂಇ 135 ಎಂಎಲ್ಎ 2023**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯ ಮಂತ್ರಿಗಳು**

# ದಿನಾಂಕ 23-01-2024 ರಂದು ನಡೆಯಲಿರುವ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ ಸಭೆಗೆ ಉತ್ತರ

<table>
<tr><th>ಕ್ರ ಸಂ</th><th>ಭರವಸೆ ಸಂಖ್ಯೆ</th><th>ವಿಷಯ</th><th>ಉತ್ತರ</th></tr>
<tr><td>1</td><td>5358/ 2015</td><td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 198 ನೇ ವಾರ್ಡಿನ ಗಂಗಶೆಟ್ಟಿಕೆರೆ ಅಂಗಳ ಒತ್ತುವರಿಜಾಗವನ್ನು ತೆರವುಗೊಳಿಸುವ ಬಗ್ಗೆ.</td><td>ಬೆಂಗಳೂರು ಪೂರ್ವತಾಲ್ಲೂಕು, ಕೆ.ಆರ್.ಪುರ ಹೋಬಳಿ ಕೆ.ಆರ್.ಪುರ ಗ್ರಾಮದ ಸ.ನಂ 58 ಹಾಗೂ ದೇವಸಂದ್ರ ಗ್ರಾಮದ ಸ.ನಂ. 46 ರ ಸರ್ಕಾರಿಕೆರೆ (ಗಂಗಶೆಟ್ಟಿಕೆರೆ) ಯಅಭಿವೃದ್ಧಿ ಹಾಗೂ ಒತ್ತುವರಿಯನ್ನು ತೆರವುಗೊಳಿಸುವ ವಿಚಾರದಲ್ಲಿ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕು ರವರಿಂದ ವರದಿಯನ್ನು ಪಡೆಯಲಾಗಿದ್ದು, ಸದರಿಯವರ ವರದಿಯಂತೆ ಪ್ರಸ್ತಾಪಿತ ಕೆ.ಆರ್.ಪುರ ಗ್ರಾಮದ ಸ.ನಂ 58 ರಲ್ಲಿ ಒಟ್ಟು ವಿಸ್ತೀರ್ಣ 18-32 ಎ/ಗುಂ. ಇದ್ದು, ಅರಣ್ಯ ಇಲಾಖೆ ಎಂದು ನಮೂದಾಗಿದ್ದು, ಖಾಸಗಿ ಒತ್ತುವರಿ 2-17.12 ಎ/ಗುಂ. ಸರ್ಕಾರಿ ಒತ್ತುವರಿ 0-16.08 ಗುಂಟೆ, ದೇವಸಂದ್ರ ಗ್ರಾಮದ ಸ.ನಂ.46 ರಲ್ಲಿ ಒಟ್ಟು 2-35 ಎ/ಗು ವಿಸ್ತೀರ್ಣವಿದ್ದು, ಈ ಪೈಕಿ 1-07 ಎ/ಗು ಖಾಸಗಿ ಒತ್ತುವರಿ ಹಾಗೂ 0-38 ಎ/ಗು ಸರ್ಕಾರಿ ಒತ್ತುವರಿಯಾಗಿರುತ್ತದೆ. ಸದರಿ ಜಮೀನುಗಳ ಒತ್ತುವರಿಯು ಈ ಕೆಳಕಂಡಂತೆ ಇರುತ್ತದೆ.<br><br>ಕೆ.ಆರ್.ಪುರ ಗ್ರಾಮದ ಸರ್ವೆ ನಂಬರ್ 58 ರ ವಿವರ<br><br>
<table>
<tr><th>ಕ್ರ.ಸಂ</th><th>ಒತ್ತುವರಿದಾರರ ಹೆಸರು</th><th>ಒತ್ತುವರಿ ಸ್ವರೂಪ</th><th>ವಿಸ್ತೀರ್ಣ ಎ/ಗು</th></tr>
<tr><td>1</td><td>ಟ್ರಾಫಿಕ್ ಪೋಲೀಸ್ ಠಾಣೆ</td><td>ಕಟ್ಟಡಗಳು</td><td>0-01</td></tr>
<tr><td>2</td><td>ಪಂಪ್ ಹೌಸ್</td><td>ಪಂಪ್ ಹೌಸ್</td><td>0-04</td></tr>
<tr><td>3</td><td>ಖಾಸಗಿ</td><td>ಮನೆಗಳು</td><td>0-02.04</td></tr>
<tr><td>4</td><td>ಖಾಸಗಿ</td><td>ಮನೆಗಳು</td><td>0-17.08</td></tr>
<tr><td>5</td><td>ಖಾಸಗಿ</td><td>ಮನೆಗಳು</td><td>0-23</td></tr>
<tr><td>6</td><td>ಖಾಸಗಿ</td><td>ಮನೆಗಳು</td><td>0-10.08</td></tr>
<tr><td>7</td><td>ಖಾಸಗಿ</td><td>ಮನೆಗಳು</td><td>0-04</td></tr>
<tr><td>8</td><td>ರಸ್ತೆ</td><td>ಮನೆಗಳು</td><td>0-9</td></tr>
<tr><td>9</td><td>ಬಿ.ಎಂ.ಟಿ.ಸಿ</td><td>ಕಾಂಪೌಂಡ್</td><td>0-02</td></tr>
<tr><td>10</td><td>ತಾಲ್ಲೂಕು ಕಚೇರಿ</td><td>ಕಾಂಪೌಂಡ್</td><td>0-00.08</td></tr>
<tr><td colspan="3">ಒಟ್ಟು</td><td>2-33.12</td></tr>
</table>
ದೇವಸಂದ್ರ ಗ್ರಾಮದ ಸರ್ವೆ ನಂಬರ್ 46 ರ ವಿವರ<br><br>
<table>
<tr><th>ಕ್ರ.ಸಂ</th><th>ಒತ್ತುವರಿದಾರರ ಹೆಸರು</th><th>ಒತ್ತುವರಿ ಸ್ವರೂಪ</th><th>ವಿಸ್ತೀರ್ಣ ಎ/ಗು</th></tr>
<tr><td>1</td><td>ಖಾಸಗಿ</td><td>ಮನೆಗಳು</td><td>0-05</td></tr>
<tr><td>2</td><td>ರಸ್ತೆ</td><td>ರಸ್ತೆ</td><td>0-12</td></tr>
<tr><td>3</td><td>ರಸ್ತೆ</td><td>ರಸ್ತೆ</td><td>0-9.08</td></tr>
<tr><td>4</td><td>ಖಾಸಗಿ</td><td>ಮನೆಗಳು</td><td>0-02</td></tr>
<tr><td>5</td><td>ಸರ್ಕಾರಿ ಶಾಲೆ</td><td>ಶಾಲೆ</td><td>0-16.08</td></tr>
<tr><td colspan="3">ಒಟ್ಟು</td><td>2-05</td></tr>
</table>
</td></tr>
</table>

ಮಾನ್ಯ ಕೆ.ಆರ್.ಪುರ ವಿಧಾನ ಸಭಾಕ್ಷೇತ್ರದ ಸ್ಥಳೀಯ ಶಾಸಕರು / ಸಚಿವರು ಸದರಿ ಕೆರೆ ಜಮೀನಿನ ಸ್ಥಳ ಪರಿಶೀಲನಾ ಸಮಯದಲ್ಲಿ ಕೆರೆ ಜಮೀನಿನಲ್ಲಿ ಅನಧೀಕೃತವಾಗಿ ವಾಸಿಸುತ್ತಿರುವ ಬಡ ಕುಟುಂಬಗಳಿಗೆ ಪರ್ಯಾಯವಾಗಿ ಇದೇ ಕೆ.ಆರ್.ಪುರ ವಿಧಾನ ಸಭಾಕ್ಷೇತ್ರದಲ್ಲಿ ಪುನರ್ವಸತಿ ಕಲ್ಪಿಸಲು ಬದಲಿ ಜಮೀನನ್ನು ಗುರುತಿಸಲು ಸೂಚಿಸಿರುತ್ತಾರೆ. ಅದರಂತೆ ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರ ಹೋಬಳಿ, ಕೆ.ನಾರಾಯಣಪುರ ಗ್ರಾಮದ ಸ.ನಂ.49 ರಲ್ಲಿ ಜಮೀನನ್ನು ಗುರುತಿಸಲಾಗಿರುತ್ತದೆ. ಈ ಹಿಂದೆ ಸದರಿ ಜಮೀನನ್ನು ರಾಜೀವ್‌ಗಾಂಧಿ ವಸತಿ ನಿಗಮಕ್ಕೆ ನೀಡಿದ್ದು, ಸ್ಥಳೀಯ ಗ್ರಾಮಸ್ಥರಿಂದ ವಿರೋದ ವ್ಯಕ್ತವಾಗಿರುತ್ತದೆ. ಆದಕಾರಣ ಈ ಬಗ್ಗೆ ಸ್ಥಳೀಯ ಶಾಸಕರೊಂದಿಗೆ ಸಮಾಲೋಚನೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಸದರಿ ಜಮೀನಿನಲ್ಲಿ ಈಗಾಗಲೇ ಬಡ ಕುಟುಂಬಗಳು ಅನಧಿಕೃತವಾಗಿ ವಾಸಿಸುತ್ತಿರುವ ಮನೆಗಳ ಪ್ರದೇಶವನ್ನು ಹೊರತುಪಡಿಸಿ ಉಳಿಕೆ ವಿಸ್ತೀರ್ಣಕ್ಕೆ ಬಿಬಿಎಂಪಿ ವತಿಯಿಂದ ತಂತಿಬೇಲಿ ಕಾರ್ಯ ಪೂರ್ಣಗೊಳಿಸಿ ಸಂರಕ್ಷಿಸಲಾಗಿರುತ್ತದೆ ಮತ್ತು ಬಿಬಿಎಂಪಿ ವತಿಯಿಂದ ಕೆರೆಯ ಅಭಿವೃದ್ಧಿ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಬಿಬಿಎಂಪಿ ವತಿಯಿಂದ ಸದರಿ ಕೆರೆಯ ಜಮೀನಿನಲ್ಲಿ ಸಮುದಾಯ ಭವನ ನಿರ್ಮಿಸುತ್ತಿದ್ದು,ಕಾಮಗಾರಿಯನ್ನು ಸ್ಥಗಿತಗೊಳಿಸಲು ಕೋರಿ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯರವರಿಗೆ ಪತ್ರ ವ್ಯವಹರಿಸಲಾಗಿರುತ್ತದೆ.

ಮಾಜಿ ನಗರಾಭಿವೃದ್ಧಿ ಸಚಿವರು ಹಾಗೂ ಕೆ.ಆರ್.ಪುರ ವಿಧಾನ ಸಭಾಕ್ಷೇತ್ರದ ಶಾಸಕರ ಮೌಖಿಕ ಸೂಚನೆಯಂತೆ, ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ-151 ರ ವ್ಯಾಜ್ಯಗಳಿಂದ ಕೂಡಿರದ ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಮೇಡಹಳ್ಳಿ ಗ್ರಾಮದ ಸ.ನಂ. 89 ರಲ್ಲಿ 2-20 ಎ/ಗು ಜಮೀನನ್ನು ಗುರುತಿಸಿದ್ದು, ಅದರಂತೆ ದಿ: 06-07-2023 ರಂದು ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಕೆ.ಆರ್.ಪುರ ವ್ಯಾಪ್ತಿಯ ರಾಜೀವ್‌ಗಾಂಧಿನಗರದ ನಿವಾಸಿಗಳು ಕೊಳಚೆ ನಿರ್ಮೂಲನಾ ಮಂಡಳಿಯಿಂದ ನೀಡಿರುವ ಸ್ವಾಧೀನ ಪತ್ರಗಳನ್ನು ವಾಸದ ಬಗ್ಗೆ ಸಲ್ಲಿಸಿರುವ ದಾಖಲಾತಿಗಳನ್ನು ಲಗತ್ತಿಸಿ ವರದಿ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಸ್ವಾಧೀನದ ಪತ್ರಗಳನ್ನು ಪರಿಶೀಲಿಸಲಾಗಿ, ಸದರಿ ಸ್ವಾಧೀನ ಪತ್ರಗಳಲ್ಲಿ ರಾಜೀವ್‌ಗಾಂಧಿ ನಗರ-ದೇವಸಂದ್ರ ಗ್ರಾಮ ಎಂದು ಮಾತ್ರ ನಮೂದಿದ್ದು, ಯಾವ ಸರ್ವೆ ನಂಬರ್ ಗೆ ಒಳಪಡುತ್ತದೆಂದು ನಮೂದಿರುವುದಿಲ್ಲವಾದ್ದರಿಂದ ಲಗತ್ತು ಸ್ವಾಧೀನ ಪತ್ರಗಳನ್ನು ಕೆ.ಆರ್.ಪುರ ಗ್ರಾಮದ ಸ.ನಂ.58 ಮತ್ತು ದೇವಸಂದ್ರ ಗ್ರಾಮದ ಸ.ನಂ,46 ಅಥವಾ ದೇವಸಂದ್ರ ಗ್ರಾಮದ ಸ.ನಂ.51/1 (ಕೊಳಚೆ ಪ್ರದೇಶವೆಂದುಘೋಷಣೆಯಾಗಿರುವ) ರಲ್ಲಿನ ನಿವಾಸಿಗಳಿಗೆ ನೀಡಿರುತ್ತಾರೆಯೇ? ಎಂಬ ಬಗ್ಗೆ ಸ್ಪಷ್ಟನೆಯನ್ನು ನೀಡಲು ಹಾಗೂ ನೈಜತೆ ಕುರಿತು ವರದಿ ನೀಡಲು ಕೋರಲಾಗಿರುತ್ತದೆ. ದಿ: 16-08-2023 ರಂದು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರು ಈಗಾಗಲೇ ರಾಜೀವ್‌ಗಾಂಧಿನಗರ ಕೊಳಗೇರಿ ಪ್ರದೇಶವೆಂದು ಸ.ನಂ.51/1 ರಲ್ಲಿ ಘೋಷಣೆಯಾಗಿರುತ್ತದೆ ಮತ್ತುದೇವಸಂದ್ರ ಗ್ರಾಮದ ಸಂಜಯಗಾಂಧಿನಗರ ಎಂದು ಸ.ನಂ.44 ರಲ್ಲಿ ಘೋಷಣೆಯಾಗಿದ್ದು, ಆದರೆ ಸ್ವಾಧೀನಪತ್ರದಲ್ಲಿ ಉಲ್ಲೇಖಿಸಿರುವ ಅಧಿಸೂಚನೆ ಸಂಖ್ಯೆಯು ಸಂಜಯಗಾಂಧಿನಗರ ಪ್ರದೇಶಕ್ಕೆ ಸಂಬಂಧಿಸಿದ್ದಾಗಿರುತ್ತದೆ ಮತ್ತು ವಿತರಿಸಿರುವ ಸ್ವಾಧೀನ ಪತ್ರದಲ್ಲಿ ರಾಜೀವ್‌ಗಾಂಧಿನಗರ-ದೇವಸಂದ್ರ ಎಂದು ನಮೂದಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳ ಹಿನ್ನಲೆಯಲ್ಲಿ ಮೇಲ್ನೋಟಕ್ಕೆ ಹಾಲಿ ಪರಿಶೀಲಿಸಲಾಗಿರುವ ಫಲಾನುಭವಿಗಳ ಸ್ವಾಧೀನ ಪತ್ರದಂತೆ ಫಲಾನುಭವಿಗಳು ಪ್ರಸ್ತುತ ಸ.ನಂ.58 ರಲ್ಲಿರುವುದು ಕಂಡುಬಂದಿರುತ್ತದೆ ಎಂದು ವರದಿಯನ್ನು ನೀಡಿರುತ್ತಾರೆ.

ಮುಂದುವರೆದು, ದಿ: 16-08-2023 ರಂದುಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರು ತಿಳಿಸಿರುವಂತೆ, ಕೆ.ಆರ್.ಪುರ ಗ್ರಾಮದ ಸ.ನಂ.58 ರಕೆರೆ ಅಂಗಳದ ಜಮೀನಿನಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿ

| | | | |
|---|---|---|---|
| | | | ನಿರ್ಮಿಸಿಕೊಂಡಿರುವ ರಾಜೀವ್‌ಗಾಂಧಿನಗರ ಎಂಬ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಿಧಾನ ಪರಿಷತ್ತಿನ ಅರ್ಜಿ ಸಮಿತಿ ಸಂಖ್ಯೆ 47/1992 ರ ಸೂಚನೆಯಂತೆ ಬಿದರಹಳ್ಳಿ, ಹೋಬಳಿ, ಮೇಡಹಳ್ಳಿ, ಗ್ರಾಮದ ಸ.ನಂ.89 ರಲ್ಲಿ 4-15 ಎಕರೆ/ಗುಂಟೆ ಜಮೀನನ್ನು ಪರ್ಯಾಯ ವಸತಿ ಕಲ್ಪಿಸುವ ವಿಚಾರದಲ್ಲಿ ಆಶ್ರಯ ಯೋಜನೆಯಡಿ ಕ.ಭೂ.ಕಂ.ಕಾಯ್ದೆ 1964 ರ ಕಲಂ 71 ರಡಿ ಕಾಯ್ದಿರಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಅದರಂತೆ, ಮೇಡಹಳ್ಳಿ ಗ್ರಾಮದ ಸ.ನಂ.84 ರಲ್ಲಿನ 4-15 ಎ/ಗು ಜಮೀನನ್ನು ಆಶ್ರಯ ಯೋಜನೆಯಡಿ ಕ.ಭೂ.ಕಂ.ಕಾಯ್ದೆ 1964 ರ ಕಲಂ 71 ರಡಿ ಕಾಯ್ದಿರಿಸಿ ಷರತ್ತುಗಳೊಂದಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಲು ಆದೇಶ ಮಾಡಲಾಗಿರುತ್ತದೆ. ಸದರಿ ಆದೇಶದಂತೆ, ಸದರಿ ಜಮೀನನ್ನು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ರವರಿಗೆ ಹಸ್ತಾಂತರಿಸಲಾಗಿರುತ್ತದೆ ಹಾಗೂ ತಹಶೀಲ್ದಾರ್, ಬೆಂಗಳೂರು ಪೂರ್ವ ತಾಲ್ಲೂಕುರವರು ವರದಿಯೊಂದಿಗೆ ಸಲ್ಲಿಸಿರುವ ಮಂಡಳಿ ವತಿಯಿಂದ ನೀಡಲಾಗಿರುವ ಸ್ವಾಧೀನ ಪತ್ರಗಳನ್ವಯ ಭಾವಚಿತ್ರಗಳೊಂದಿಗಿನ ವಾಸದ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮ ವಹಿಸಲು ಕೋರಿ ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು ರವರಿಗೆ ಪತ್ರ ಬರೆಯಲಾಗಿರುತ್ತದೆ ಎಂದು ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆರವರು ವರದಿ ಮಾಡಿರುತ್ತಾರೆ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ. |

ಸಂಖ್ಯೆ.ಆರ್ ಡಿ 04 ಎಲ್ ಜಿಕ್ಯೂ 2024
ದಿನಾಂಕ:22.01.2024

K. Kavitharani 22/1/24
(ಕವಿತಾರಾಣಿ ಆರ್.)
ಸರ್ಕಾರದ ಜಂಟಿ ಕಾರ್ಯದರ್ಶಿ,
ಕಂದಾಯ ಇಲಾಖೆ.
(ಭೂಮಂಜೂರಾತಿ & ಭೂಸುಧಾರಣೆ)

## ಅನುಬಂಧ–1

**ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕೆ.ಐ.ಎ.ಡಿ.ಬಿ ವತಿಯಿಂದ ಕೈಗಾರಿಕಾ ಅಭಿವೃದ್ಧಿ ಹಾಗೂ ಕೈಗಾರಿಕಾ ಉಪಯೋಗಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ವಿವರ.**

| ಕ್ರ ಸಂ | ಕೈಗಾರಿಕಾ ಪ್ರದೇಶದ ಹೆಸರು | ಗ್ರಾಮ, ತಾಲ್ಲೂಕು, | ಒಟ್ಟು ವಿಸ್ತೀರ್ಣ ಎ–ಗು | ಎಕರೆ ಒಂದಕ್ಕೆ ನಿಗಧಿಪಡಿಸಿರುವ ದರ (ರೂ.ಲಕ್ಷಗಳಲ್ಲಿ) | ಅಂತಿಮ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ: |
|---|---|---|---|---|---|
| **ಕೋಲಾರ ಜಿಲ್ಲೆ** | | | | | |
| 1 | ನರಸಾಪುರ 2ನೇ ಹಂತ | ಮಿಂಡಹಳ್ಳಿ, ಕೋಲಾರ ತಾ॥ | 333–35¾ | 105.00 | ಸಿಐ 126 ಎಸ್‌ಪಿಕ್ಯೂ(ಇ) 2020 ದಿ:28–07–2020. |
| 2 | ನರಸಾಪುರ ವಿಸ್ಟ್ರಾನ್ ಕಂಪನಿ (ಹೆಚ್ಚುವರಿ) | ಅಚ್ಚಟ್ನಹಳ್ಳಿ, ಕೋಲಾರ ತಾ॥ | 15–35 | 115.25 | ಸಿಐ 100 ಎಸ್‌ಪಿಕ್ಯೂ(ಇ) 2022 ದಿ:19–04–2022. |
| 3 | ನರಸಾಪುರ (ಹೆಚ್ಚುವರಿ) | ಅಚ್ಚಟ್ನಹಳ್ಳಿ, ಕೋಲಾರ ತಾ॥ | 5–35 | 105.00 | ಸಿಐ 152 ಎಸ್‌ಪಿಕ್ಯೂ(ಇ) 2020 ದಿ:12–08–2020. |
| 4 | ನರಸಾಪುರ 3ನೇ ಹಂತ | ಬಾವನಹಳ್ಳಿ, ಮಾಲೂರು ತಾ॥ | 722–2¼ | 115.25 | ಸಿಐ 250 ಎಸ್‌ಪಿಕ್ಯೂ(ಇ) 2020 ದಿ:02–06–2022. |
| 5 | ವೇಮಗಲ್ 2ನೇ ಹಂತ | ವೇಮಗಲ್, ಕೋಲಾರ ತಾ॥ | 457–37¼ | 115.25 | ಸಿಐ 156 ಎಸ್‌ಪಿಕ್ಯೂ(ಇ) 2020 ದಿ:21–01–2023. |
| | | ಒಟ್ಟು | **1535–04¼** | | |
| **ಚಿಕ್ಕಬಳ್ಳಾಪುರ ಜಿಲ್ಲೆ** | | | | | |
| 1 | ಮಸ್ತೇನಹಳ್ಳಿ 2ನೇ ಹಂತ | ತಳಗವಾರ, ಮಾರಪಲ್ಲಿ, ಮಲ್ಲಾಪುರ ಮತ್ತು ಮಸ್ತೇನಹಳ್ಳಿ, ಚಿಂತಾಮಣಿ ತಾ॥ | 414–25 | 42.00 ರಿಂದ 60.00 | ಸಿಐ 08 ಎಸ್‌ಪಿಕ್ಯೂ(ಇ) 2020 ದಿ:21–05–2020. |
| 2 | ಕುಡುಮಲಕುಂಟೆ 3ನೇ ಹಂತ | ಗೌಡಸಂದ್ರ, ದೊಡ್ಡಕುರಗೋಡು, ಗೌರಿಬಿದನೂರು ತಾ॥ | 820–36 | 50.00 | ಸಿಐ 52 ಎಸ್‌ಪಿಕ್ಯೂ(ಇ) 2019 ದಿ:19–08–2022. |
| | | ಒಟ್ಟು | **1235–21** | | |

SPL - DC
K.I.A.D.B.

ಅನುಬಂಧ - ೨

18

# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಐ 590 ಎಸ್‌ಪಿಕ್ಯೂ 2012

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 18.03.2013

## ಸುತ್ತೋಲೆ

ವಿಷಯ: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ

* * * *

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಕೈಗಾರಿಕಾ ಉದ್ದೇಶಕ್ಕಾಗಿ / ಏಕ ಘಟಕ ಸಂಕೀರ್ಣ ಯೋಜನೆಗಳಿಗಾಗಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿದ್ದು, ಈ ಕೆಳಕಂಡ ಪ್ರಕರಣಗಳಲ್ಲಿ ಸರಿಯಾಗಿ ಪರಿಶೀಲಿಸದೆಯೇ ಕೆ.ಐ.ಎ.ಡಿ.ಬಿ.ಯು ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

1. ಕೆ.ಐ.ಎ.ಡಿ. ಕಾಯ್ದೆ ಕಲಂ 28(1)ರ ಪ್ರಾಥಮಿಕ ಅಧಿಸೂಚನೆಯಲ್ಲಿ ದೇವಸ್ಥಾನ, ಶಾಲೆಗಳು, ಸ್ಮಶಾನಗಳು ಮತ್ತು ವಾಸದ ಮನೆಗಳು ಸೇರಿರುತ್ತವೆ.
2. ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು / ರೋಗಗ್ರಸ್ಥ ಕೈಗಾರಿಕಾ ಘಟಕಗಳು ಹೊಂದಿರುವ ಜಮೀನುಗಳು ಸೇರಿರುತ್ತವೆ.
3. ಸ್ಥಳೀಯ ಯೋಜನಾ ಪ್ರಾಧಿಕಾರಗಳು ವಸತಿ ಉದ್ದೇಶಕ್ಕೆ ಅನುಮೋದಿಸಲ್ಪಟ್ಟಿರುವ ಜಮೀನುಗಳು / ಸರ್ಕಾರದ ಭೂ ಬದಲಾವಣೆಗೊಂಡಿರುವ ಜಮೀನುಗಳು / ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ನೀಡಿರುವ ಪ್ರಕರಣಗಳಿಗೆ ಸಂಬಂಧಿಸಿದ ಜಮೀನುಗಳು ಸೇರಿರುತ್ತವೆ.
4. ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳು ಸೇರಿರುತ್ತವೆ.

ಕೆ.ಐ.ಎ.ಡಿ. ಕಾಯ್ದೆ ಕಲಂ 28(4)ರಡಿ ಅಂತಿಮ ಅಧಿಸೂಚನೆಯನ್ನು ತಯಾರಿಸುವಾಗ ಮೇಲೆ ಹೇಳಿದ ಜಮೀನುಗಳನ್ನು ಹೊರತುಪಡಿಸಿ, ಕೆ.ಐ.ಎ.ಡಿ. ಕಾಯ್ದೆ ಕಲಂ 4ರಡಿ ಅಧಿಸೂಚನೆಯನ್ನು ಹೊರಡಿಸಲಾಗುತ್ತಿದೆ. ಇದರಿಂದಾಗಿ ಪ್ರಾಥಮಿಕ ಅಧಿಸೂಚನೆ ವಿಸ್ತೀರ್ಣಕ್ಕೂ, ಅಂತಿಮ ಅಧಿಸೂಚನೆಯಲ್ಲಿನ ವಿಸ್ತೀರ್ಣಕ್ಕೂ ವ್ಯತ್ಯಾಸ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ನ್ಯೂನತೆಗಳನ್ನು ಸರಿಪಡಿಸಲು ಈ ಹಿಂದೆ ದಿನಾಂಕ: 03.03.2007ರಂದು ಹೊರಡಿಸಲಾದ ಸುತ್ತೋಲೆ ಸಂಖ್ಯೆ: ಸಿಐ 151 ಎಸ್‌ಪಿಕ್ಯೂ 2007ನ್ನು ಈ ಕೆಳಕಂಡ ಅಂಶಗಳಿಗೆ ಸಂಬಂಧಿಸಿದಂತೆ ಭಾಗಶಃ ಮಾರ್ಪಡಿಸಲಾಗಿದೆ.

ಕೆ.ಐ.ಎ.ಡಿ.ಬಿ. ವತಿಯಿಂದ ಕೈಗಾರಿಕಾ ಉದ್ದೇಶಕ್ಕೆ / ಏಕ ಘಟಕ ಸಂಕೀರ್ಣ ಯೋಜನೆಗಳಿಗೆ ಜಮೀನುಗಳನ್ನು ಭೂಸ್ವಾಧೀನಪಡಿಸಲು ಪ್ರಾಥಮಿಕ ಅಧಿಸೂಚನೆಯನ್ನು ತಯಾರಿಸುವ ಸಂದರ್ಭದಲ್ಲಿ ಇನ್ನು ಮುಂದೆ ಈ ಕೆಳಕಂಡ ವಿಧಾನವನ್ನು ಪಾಲಿಸಲು ಈ ಮೂಲಕ ಸೂಚಿಸಲಾಗಿದೆ.:

1. ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸಿದ್ಧಪಡಿಸುವ ಮೊದಲು ವಿಶೇಷ ಭೂಸ್ವಾಧೀನಾಧಿಕಾರಿಯವರು ಪ್ರಸ್ತಾಪಿತ ಜಮೀನಿನ ಮೇಲ್ಮೈಲಕ್ಷಣಗಳ ಬಗ್ಗೆ ಸ್ಥಳ ಪರಿಶೀಲನೆ ನಡೆಸಿದ ನಂತರ ಸ್ಥಳ ತನಿಖಾ ಟಿಪ್ಪಣಿ ಸಹಿತ ಪ್ರಾಥಮಿಕ ಅಧಿಸೂಚನೆ ಪ್ರಸ್ತಾವನೆಯನ್ನು ಸಲ್ಲಿಸುವುದು ಹಾಗೂ ಅಂತಿಮ ಅಧಿಸೂಚನೆ ಹೊರಡಿಸುವ ಮೊದಲು ಜಂಟಿ ಅಳತೆ ಕಾರ್ಯವನ್ನು ಪೂರೈಸಿ, ನಂತರ ಅಂತಿಮ ಅಧಿಸೂಚನೆ ಪ್ರಸ್ತಾವನೆ ಸಿದ್ಧಪಡಿಸುವುದು.
2. ದೇವಸ್ಥಾನ, ಸ್ಮಶಾನ, ಶಾಲೆ ಮತ್ತು ಆಟದ ಮೈದಾನ, ವಾಸದ ಮನೆಗಳು / ವಸತಿ ಪ್ರದೇಶಗಳನ್ನು ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸಾಧ್ಯವಾದಷ್ಟು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
3. ಹಾಲಿ ನಡೆಯುತ್ತಿರುವ ವಿವಿಧ ಕೈಗಾರಿಕೆಗಳು, ರೋಗಗ್ರಸ್ಥ ಕೈಗಾರಿಕಾ ಘಟಕಗಳ ಪ್ರದೇಶಗಳನ್ನು ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ಸಾಧ್ಯವಾದಷ್ಟು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
4. ಆಯಕಟ್ಟಿಗೆ ಧಕ್ಕೆ ಉಂಟಾಗದಂತೆ ತೋಟಗಳು, ಫಲವತ್ತಾದ ಜಮೀನು ಹಾಗೂ ವರ್ಷಕ್ಕೆ 2 ಬೆಳೆ ಬೆಳೆಯುವ ಜಮೀನುಗಳು, ತರಿ ಜಮೀನುಗಳನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರತುಪಡಿಸುವುದು.
5. ಗ್ರಾಮಠಾಣಾದ ಸರಹದ್ದಿನಿಂದ ಗ್ರಾಮದ ಸುತ್ತಲೂ ವಿಸ್ತರಣೆಗಾಗಿ 100 ಮೀಟರ್ ವ್ಯಾಪ್ತಿಯ ಜಮೀನುಗಳನ್ನು ಹೊರತುಪಡಿಸುವುದು.

(ವಿ.ವಿ. ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು.

. . . . 3